# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 407 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 07/12/2023 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡಲಾಗುತ್ತಿರುವ ಪಿಂಚಣಿ ಧನಸಹಾಯ ಸೌಲಭ್ಯ ಪಡೆಯಲು ನೋಂದಾಯಿತ ಕಾರ್ಮಿಕರು ಮಂಡಳಿಯಲ್ಲಿ ಕನಿಷ್ಠ ಮೂರು ವರ್ಷಗಳ ಸದಸ್ಯತ್ವದೊಂದಿಗೆ 60 ವರ್ಷ ಪೂರ್ಣಗೊಂಡ ಆರು ತಿಂಗಳೊಳಗೆ ಪಿಂಚಣಿ ಕೋರಿ ನಿಗದಿತ ದಾಖಲಾತಿಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಿರುವುದರಿಂದ ವಯೋಮಾನ ಮೀರಿರುವ ಹಲವಾರು ಅರ್ಹ ಕಾರ್ಮಿಕರು ಸದರಿ ಸೌಲಭ್ಯದಿಂದ ವಂಚಿತರಾಗಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಮಾಹಿತಿ ಹಾಗೂ ಅರಿವಿನ ಕೊರತೆಯ ಕಾರಣಗಳಿಂದಾಗಿ, ರಾಜ್ಯದಾದ್ಯಂತ ಹಲವಾರು ಮಂದಿ 60 ವರ್ಷ ಪೂರ್ಣಗೊಂಡವರು ಆರು ತಿಂಗಳೊಳಗೆ ಪಿಂಚಣಿ ಧನ ಸಹಾಯ ಕೋರಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಾಧ್ಯವಾಗಿರದ ಹಲವಾರು ಪ್ರಕರಣಗಳಿದ್ದು, ಸದರಿ ಪ್ರಕರಣಗಳಲ್ಲಿ ಆ ಕಾರ್ಮಿಕರಿಗೆ ನ್ಯಾಯ ಒದಗಿಸಲು ಸರ್ಕಾರ ಇದುವರೆಗೆ ತೆಗೆದುಕೊಂಡ ಕ್ರಮವೇನು; | ಪಿಂಚಣಿ ಸೌಲಭ್ಯವು ವೃದ್ಧಾಪ್ಯದಲ್ಲಿ ನೀಡುವ ಸಾಮಾಜಿಕ ಭದ್ರತೆ ಯೋಜನೆಯಾಗಿರುತ್ತದೆ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಪಿಂಚಣಿ ಸೌಲಭ್ಯಗಳನ್ನು ಪಡೆಯಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಹಾಗೂ ಕರ್ನಾಟಕ ನಿಯಮ, 2006ರಲ್ಲಿ ಅರ್ಹ ಫಲಾನುಭವಿಗಳಿಗೆ ನಿಯಮ 49-ಸಿ ರಲ್ಲಿ 6 ತಿಂಗಳ ಕಾಲಾವಾಧಿಯನ್ನು ಅರ್ಜಿ ಸಲ್ಲಿಕೆಗಾಗಿ ನಿಗದಿಪಡಿಸಲಾಗಿರುತ್ತದೆ.<br>ಫಲಾನುಭವಿಗಳು ಈ ಸೌಲಭ್ಯದಿಂದ ವಂಚಿತರಾಗಬಾರದು ಎನ್ನುವ ಕಾರಣಕ್ಕೆ 06 ತಿಂಗಳ ದೀರ್ಘ ಕಾಲಾವಾಧಿಯನ್ನು |
| ಇ) | ರಾಜ್ಯದಲ್ಲಿ ಅರ್ಹ ಫಲಾನುಭವಿಗಳು, 60 ವರ್ಷ ಪೂರ್ಣಗೊಂಡ ಆರು ತಿಂಗಳೊಳಗೆ ಪಿಂಚಣಿ ಧನಸಹಾಯ ಕೋರಿ ಅರ್ಜಿ ಸಲ್ಲಿಸಲು ತಿಳಿಯದೇ ನಂತರದ ದಿನಗಳಲ್ಲಿ ಅರ್ಜಿ ಸಲ್ಲಿಸಿರುವ/ಸಲ್ಲಿಸುವ ಅರ್ಹ | |

| | | |
|---|---|---|
| | ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ ದೊರೆಯುವಂತಾಗಲು ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ಸರ್ಕಾರ ತಂದಿದೆಯೇ (ವಿವರ ನೀಡುವುದು) | ನೀಡಲಾಗಿರುತ್ತದೆ. ಪ್ರಸ್ತುತ 06 ತಿಂಗಳ ಕಾಲಮಿತಿಯನ್ನು 01 ವರ್ಷಕ್ಕೆ ವಿಸ್ತರಿಸಲು ಮಂಡಳಿಯ ಶಾಸನಾತ್ಮಕ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಅದರಂತೆ, ಪ್ರಸ್ತುತ ನಿಯಮಗಳಲ್ಲಿ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಕಾಇ 511 ಎಲ್‌ಇಟಿ 2023**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# Karnataka Legislative Council

| | |
|---|---|
| Starred Question No. | 407 |
| Name of the Hon'ble Member | Shree Pratap Simha Nayak. K (Elected by Legislative Assembly) |
| To be Answered on | 07/12/2023 |
| To be Answered by | Hon'ble Labour Minister |

| Sl. No. | Question | Answers |
|---|---|---|
| 1. | Has it come to the notice of the Government that the eligible beneficiaries of the Karnataka Building and Construction Other Construction Workers' Welfare Board are being deprived of the opportunity of getting pension because of the condition that a person who has membership of minimum 3 years and completes 60 years should apply for Pension within time limit of 6 months from the completion of 60 years. | Yes. |
| 2. | If Yes, what are the steps initiated to provide justice to the Workers who are not able to apply for Online Pension within 6 months of completing 60 years of age because of lack of information and awareness; | A limitation period of 6 months is fixed under Rule 49 (c) of the Building and Other Construction Workers (Regulation of Employment and Conditions of Service) Karnataka Rules, 2006 for submitting the application for pension by eligible beneficiaries. The limitation period of 6 months has been provided because the eligible beneficiaries should not be deprived of this benefit. Steps have been taken for Amendment of the Rules. Steps have been taken to extend the limitation period from the existing 6 months to 1 year by amendment of Rule 49 (c) as per the resolution of the Board as the Pension facility is a Social Security benefit given in the old age. |
| 3. | Has the steps been taken for amendment of rules to extend pension facility to the eligible beneficiaries of Karnatka Construction and other Workers Welfare Board who are/were not able to apply for Pension within 6 months of completing 60 years (provide details) | |

LD 511 LET 2023

(SANTOSH S LAD)
Labour Minister

## ಪೂರಕ ಟಿಪ್ಪಣಿ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ ಸಿಂಹ ನಾಯಕ್ .ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 407**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ದಿನಾಂಕ: 18.01.2007 ರಿಂದ ಕಾರ್ಯನಿರ್ವಹಿಸುತ್ತಿದ್ದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಾಯಿಸಿ ಅವರಿಗೆ ಮಂಡಳಿಯಿಂದ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಯನ್ನು ನೀಡಲಾಗುತ್ತಿದೆ.

ಮಂಡಳಿಯಲ್ಲಿ ಈವರಗೆ 46.42ಲಕ್ಷ ಕಟ್ಟಡ ಕಾರ್ಮಿಕರನ್ನು ನೋಂದಾಯಿಸಲಾಗಿರುತ್ತದೆ. ನೋಂದಾಯಿತ ಫಲಾನುಭವಿಗಳಿಗೆ ರೂ.5,666 ಕೋಟಿಗಳ ವಿವಿಧ ಧನಸಹಾಯವನ್ನು ನೀಡಲಾಗಿರುತ್ತದೆ.

2007ರ ನಂತರ ರಾಜ್ಯದಲ್ಲಿ ಕೈಗೊಳ್ಳಲಾಗುತ್ತಿರುವ ಎಲ್ಲಾ ನಿರ್ಮಾಣ ಕಾಮಗಾರಿಗಳ ಮಾಲೀಕರು/ನಿಯೋಜಕರು ನಿರ್ಮಾಣ ಕಾಮಗಾರಿಗೆ ತಗಲುವ ಅಂದಾಜು ವೆಚ್ಚದಲ್ಲಿ ಶೇ.1ರಷ್ಟು ಮೊತ್ತವನ್ನು ಮಂಡಳಿಗೆ ಸುಂಕವಾಗಿ ಪಾವತಿಸಬೇಕಾಗಿರುತ್ತದೆ.

ಮಂಡಳಿಯಿಂದ ನೋಂದಣಿಗಾಗಿ ತಂತ್ರಾಂಶವನ್ನು ರೂಪಿಸಲಾಗಿದ್ದು ಪ್ರಸ್ತುತ ಸಂಪೂರ್ಣ ನೋಂದಣಿ. ನವೀಕರಣ ಹಾಗೂ ಕ್ಲೇಮ್ ಅರ್ಜಿಗಳ ವಿಲೇವಾರಿಯು ತಂತ್ರಾಂಶದಲ್ಲಿ ಮಾಡಲಾಗುತ್ತಿದೆ.

ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು ಫಲಾನುಭವಿಗಳನ್ನು ತಂತ್ರಾಂಶದಲ್ಲಿ ಕಾರ್ಮಿಕರನ್ನು ನೋಂದಾಯಿಸಿರುತ್ತಾರೆ. ಕಾರ್ಮಿಕ ಅಧಿಕಾರಿಗಳು ಮತ್ತು ಸಹಾಯಕ ಕಾರ್ಮಿಕ ಆಯುಕ್ತರು ಕಾರ್ಮಿಕರ ಕ್ಲೇಮ್ ಅರ್ಜಿಗಳನ್ನು ಪರಿಶೀಲಿಸಿ ವಿಲೇವಾರಿ ಮಾಡುತ್ತಾರೆ.

# Supplementary Note

## LC Star Question No.407 by Shri Prathap Simha Nayak .K

The Building and other Construction workers welfare Board is functioning since 18.01.2007. The Building and other Construction workers are registered as beneficiaries with the board and various welfare and social security schemes are being given to them.

46.42lakhs Construction worker have been registered so far with the board. Rs5,666 Crores has been given to the workers as financial assistance under these schemes.

Every employer or contractor who undertakes any Building or other construction activity is required to pay 1% cess on the estimated cost of construction to the board.

The Board has developed its own software and the registration, renewal and Claims of the construction workers is processed through the software.

The Senior Labour Inspectors/ Labour Inspectors are Notified as Registering officers and the Labour Officers and the Assistant Labour Commissioners are the sanctioning Authorities.